## ನಾನೂ ಬರಬಹುದೇ?



ರಮೇಶನ ಮನೆಗೆ ಪ್ರತಿ ದಿನ ಕುತ್ತಿಗೆಯಲ್ಲಿ ಬೆಲ್ಟ್ ಹಾಕಿರುವ ಮುದ್ದಾದ ನಾಯಿ ಬರುತ್ತಿತ್ತು. ರಮೇಶ ಅದರ ತಲೆ ನೇವರಿಸಿ ಮುದ್ದು ಮಾಡುತ್ತಿದ್ದ. ನಾಯಿ ಒಂದು ಮೂಲೆಗೆ ಹೋಗಿ ಒಂದು ಗಂಟೆ ನಿದ್ದೆ ಮಾಡಿ ಎದ್ದು ಹೋಗುತ್ತಿತ್ತು. ಹಲವು ದಿನ ಹೀಗೇ ನಡೆಯಿತು.

ಒಂದು ದಿನ ರಮೇಶ ಒಂದು ಚೀಟಿಯಲ್ಲಿ, 'ಈ ನಾಯಿ ತುಂಬಾ ಸೌಮ್ಯವಾಗಿದೆ. ನಮ್ಮ ಮನೆಯಲ್ಲಿ ದಿನಾ ನಿದ್ದೆ ಮಾಡಿ ಹೋಗುತ್ತದೆ. ಇದರಿಂದ ಯಾರಿಗೂ ತೊಂದರೆಯಾಗಿಲ್ಲ. ಮಾಲೀಕರು ಯಾರೋ ಗೊತ್ತಾಗುತ್ತಿಲ್ಲ' ಎಂದು ಬರೆದು ನಾಯಿಯ ಕುತ್ತಿಗೆಗೆ ಸಿಕ್ಕಿಸಿ ಕಳುಹಿಸಿದ. ಮಾರನೇ ದಿನ ನಾಯಿಯ ಕುತ್ತಿಗೆಯಲ್ಲಿ ಒಂದು ಚೀಟಿ ಕಾಣಿಸಿತು: 'ನಾವೇ ಇದರ ಮಾಲೀಕರು. ನನ್ನ ಹೆಂಡತಿ ಒಂದು ನಿಮಿಷವೂ ಬಿಡುವಿಲ್ಲದೆ ಮಾತನಾಡುತ್ತಾಳೆ. ನಾಯಿ ಬೇಸತ್ತು ನಿಮ್ಮ ಮನೆಗೆ ಬಂದು ನಿದ್ದೆ ಮಾಡುತ್ತಿದೆ. ನಾನೂ ಬರಬಹುದೇ?'

**ಸಿಹಿಮೊಗೆ ರಮೇಶ್**



## ಫೇಲ್ ಆಗಲು ಸಾಧ್ಯವಿಲ್ಲ!

ಅನೇಕ ವರ್ಷಗಳಿಂದ ಕಿಡ್ನಿ ಸಮಸ್ಯೆಯಿಂದ ನರಳುತ್ತಿದ್ದ ಗುಂಡ ಸಂಪೂರ್ಣ ಪರೀಕ್ಷೆಗೆ ಒಳಗಾದ. ಅವನ ಮೆಡಿಕಲ್ ರಿಪೋರ್ಟ್ ನೋಡಿದ ಡಾಕ್ಟರ್ ಗುಂಡನ ಹತ್ತಿರ, 'ನೋಡ್ರೀ, ನಿಮ್ಮ ಎರಡು ಕಿಡ್ನಿನೂ ಫೇಲ್ ಆಗಿವೆ' ಎಂದರು. ಗುಂಡ, 'ಅದು ಹೇಗೆ ಸಾಧ್ಯ ಡಾಕ್ಟರ್? ನನ್ನ ಕಿಡ್ನಿ ಯಾವ ಪರೀಕ್ಷೆ ಬರೆದಿವೆ ಅಂತ ಫೇಲ್ ಆಗ್ತವೆ? ನಮಗೇನೂ ಅರ್ಥ ಆಗಲ್ಲ ಅಂತ ಏನೇನೊ ಹೇಳಬೇಡಿ ನೀವು....' ಎಂದಾಗ ಡಾಕ್ಟರ್ ಮೂರ್ಛೆ ಬೀಳುವುದೊಂದೇ ಬಾಕಿ!

**ಸಿ.ಆರ್. ಪುಷ್ಪ**